**ಓ.ಎಸ್. ನಂಬರ್ :** 59/2019
ಪಿ.ಡಬ್ಲ್ಯೂ : 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ : 04.04.2022

**ಪಾಟೀ ಸವಾಲು : 3 ನೇ ಪ್ರತಿವಾದಿಯ ಪರವಾಗಿ ಶ್ರೀ ಹೆಚ್ ಎಸ್ ಪಿ ವಕೀಲರಿಂದ**

ನಾನು ದಾವಾಸ್ತಿಯನ್ನು ಮರಿಯಮ್ಮ ಮತ್ತು ಇತರ 6 ಜನರಿಂದ ಖರೀದಿ ಮಾಡಿದ್ದೇನೆ. ನನಗೆ ಮರಿಯಮ್ಮ ಅವರ ಪರಿಚಯವಿದೆ. ನನಗೆ ದಾವಾಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ಮರಿಯಮ್ಮ ಅವರು ಸರ್ವೆ ನಂಬರ್ 57/2 ರಲ್ಲಿ 45 ಸೆಂಟ್ಸ್ ಜಾಗವನ್ನು ದಿನಾಂಕ 25.04.1996 ರಂದು ಮಾರಾಟ ಮಾಡಿದ್ದಾರೆಂದರೆ ಇರಬಹುದು. 3 ನೇ ಪ್ರತಿವಾದಿಯು ಓ ಎಸ್ ನಂಬರ್ 2/2000 ರಂತೆ ಸದರಿ 45 ಸೆಂಟ್ಸ್ ಜಾಗದ ಸ್ವಾಧೀನವನ್ನು ಕೋರಿ ಮಡಿಕೇರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆಂದರೆ ಸರಿ. ಸದರಿ ದಾವೆ ವಜಾ ಆಗಿದೆ ಎಂದರೆ ಸರಿ. ಸದರಿ ಆದೇಶದ ವಿರುದ್ದ ಆರ್ ಎ ನಂಬರ್ 59/2005 ರಂತೆ ಮಡಿಕೇರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಸದರಿ 45 ಸೆಂಟ್ಸ್ ಜಾಗವನ್ನು ಈ ದಾವೆಯ 3 ನೇ ಪ್ರತಿವಾದಿಗೆ ಬಿಟ್ಟುಕೊಡುವಂತೆ ಆದೇಶ ಮಾಡಿರುತ್ತಾರೆಂದರೆ ಸರಿ. ಸದರಿ ದಾವೆ ಮತ್ತು ಮೇಲ್ಮನವಿಯಲ್ಲಿ ನಾನೂ ಕೂಡ ಪಕ್ಷಗಾರರಾಗಿದ್ದೆನು ಎಂದರೆ ಸರಿ. ಸದರಿ ಆರ್ ಎ ನಂಬರ್ 59/2005 ರ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ ನಂಬರ್ 2753/2011 ನ್ನು ಸಲ್ಲಿಸಿದ್ದೇನೆಂದರೆ ಸರಿ. ಸದರಿ ಮೇಲ್ಮನವಿ ವಿಚಾರಣೆಗೆ ಬಾಕಿಯಿದೆ ಎಂದರೆ ಸರಿ. 3 ನೇ ಪ್ರತಿವಾದಿ ದಾವಾ ಸರ್ವೆ ನಂಬರ್ ನಲ್ಲಿ 45 ಸೆಂಟ್ಸ್ ಜಾಗ ಖರೀದಿ ಮಾಡಿರುವುದರಿಂದ ಸದರಿ ಆಸ್ತಿಯ ಸ್ವಾಧೀನಕ್ಕೆ 3 ನೇ ಪ್ರತಿವಾದಿಯು ಅರ್ಹರು ಎಂದರೆ ಸಾಕ್ಷಿಯು ಮರಿಯಮ್ಮ ಅವರು ನನಗೆ 1994 ರಲ್ಲಿ ಕರಾರು ಪತ್ರವನ್ನು ಮಾಡಿ ದಾವಾ ಸ್ವತ್ತಿನ ಸ್ವಾಧೀನವನ್ನು ಕೊಟ್ಟಿದ್ದರು ಮತ್ತು 3 ನೇ ಪ್ರತಿವಾದಿಯು ದಾವೆಯನ್ನು ಹೂಡುವವರೆಗೂ ಸದರಿ

ಕ್ರಯಪತ್ರದ ಬಗ್ಗೆ ನನಗೆ ಮಾಹಿತಿಯಿರಲಿಲ್ಲ ಎನ್ನುತ್ತಾರೆ. ನಾನು ಮರಿಯಮ್ಮ ಅವರೊಂದಿಗೆ 1994 ರಲ್ಲಿ ಕ್ರಯಕರಾರು ಪತ್ರ ಮಾಡಿಕೊಂಡು ಮುಂಗಡ ಹಣವನ್ನು ನೀಡಿದ ವಿಚಾರವನ್ನು ವಾದಪತ್ರದಲ್ಲಿ ಹೇಳಿರುತ್ತೇನೆ. ನಾನು 3 ನೇ ಪ್ರತಿವಾದಿಯ ಬಗ್ಗೆ ಈ ದಾವೆಯಲ್ಲಿ ಯಾವುದೇ ಆಕ್ಷೇಪಣೆ ಮಾಡಿಲ್ಲ ಮತ್ತು ಯಾವ ಕಾರಣದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆಂದು ವಾದಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿ. ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದರಿಂದ 3 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿದ್ದೇನೆಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಎನ್ ಸಿ ಸಿ ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಯರ ಪರವಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸೋಮವಾರಪೇಟೆ.